118

ತಾರೀಖು 6ನೆ ಮೇ 1907.

ನಂ. ರೆ. 9786—ಲ್ಯಾ. ರೆ. 21-06—52, 1907ನೆ ಇಸವಿಯ ಮೇ 3ನೆ ತಾರೀಖಿನ ಫೈ. 8288-97—ಲ್ಯಾ. ರೆ. 21-06—51ನೆ ನಂಬರಿನ ಸರ್ಕಾರಿ ಹುಕುಮಿನ 2ನೆಯ ಪರಿಚ್ಛೇದದ ಪ್ರಕಾರ ಅಸಿಸ್ಟೆಂಟ್ ಕಮಿಷನರ್ ಮಿ॥ ಆನಂದರಾವ್ ಸಿರ ಸಿಯವರನ್ನು 1907ನೆ ಇಸವಿಯ ಜುಲೈ 1ನೆ ತಾರೀಖಿನಿಂದ ರಿಕಾರ್ಡುಗಳನ್ನು ವಿಂಗಡಿಸುವ ಕೆಲಸದ ಇನ್‌ಸ್ಪೆಕ್ಟರನ್ನಾಗಿ ಡೊಕರ್ರಾಡಿ ಇದೆ.

ತಾರೀಖು 7ನೆ ಮೇ 1907.

ನಂ. ರೆ. 9793—ಲ್ಯಾ. ರೆ. 38-06—21, 1906ನೆ ಇಸವಿಯ ಅಕ್ಟೋಬರ್ 5ನೆ ತಾರೀಖಿನ ಸಿ. 26—ಎಲ್. ಆರ್. 38-06—4ನೆ ನಂಬರ್ 1906ನೆ ಡಿಸೆಂಬರ್ 6ನೆ ತಾರೀಖಿನ 5696-ಎಲ್. ಆರ್. 38—06—8ನೆ ನಂಬರ್ ಮತ್ತು 1907ನೆ ಇಸವಿಯ ಏಪ್ರೆಲ್ 5ನೆ ತಾರೀಖಿನ 9056-ಎಲ್. ಆರ್. 38—06—20ನೆ ನಂಬರ್ ಸರ್ಕಾರಿ ಇಸ್ತಿಹಾರ್ನಾಮೆಗಳಲ್ಲಿ ಅಸಿಸ್ಟೆಂಟ್ ಕಮಿಷನರ್ ಮಿ॥ ಟಿ. ಜೋಕ್ಕಣ್ಣನವರಿಗೆ ಕೊಟ್ಟ ರಜಾವಿನಿಂದ ಅವರನ್ನು ವಾಪಸು ಕರೆಸಿ ಮಿ॥ ಕೆ. ಆರ್. ಶ್ರೀನಿವಾಸ ಐಯ್ಯಂಗಾರ್‌ರವರು ಬೀರೆ ಕೆಲಸದಲ್ಲಿರುವ ವರೆಗೆ ಹಂಗಾಮಿಯಾಗಿ ಬೆಂಗಳೂರು ಡಿಸ್ಟ್ರಿಕ್ಟಿಗೆ ದೊಡ್ಡಬಳ್ಳಾಪುರದ ಸಬ್ ಡಿವಿಜ್ ಚಾರ್ಜಿಗೆ ಹಾಕಿ ಇದೆ.

ತಾರೀಖು 7ನೆ ಮೇ 1907.

ನಂ. ರೆ. 9809—ಲ್ಯಾ. ರೆ. 25-06—9, ರೆವಿನ್ಯೂ ಕಮಿಷನರ ಆಫೀಸಿನ ಮಾನೇಜರಾಗಿ ಕೆಲಸ ನೋಡುತ್ತಿರುವ ಅ ಮಲ್‌ದಾರ್ ಮಿ॥ ಎಂ. ಸದಾಶಿವರಾವ್, ಬಿ. ಎ., ಬಿ. ಎಲ್., ರವರನ್ನು ರಜಾವಿನ ಮೇಲೆ ಇರುವ ಅಮಲ್ದಾರ್, ಮೆ॥ ಪಿ. ಸುಬ್ಬರಾಯಲು ನಾಯಡು ಯವರಿಗೆ ಬದಲಾಗಿ ನೆಲಮಂಗಲ ತಾಲ್ಲೂಕಿಗೆ ಹಾಕಿ ಇದೆ.

ತಾರೀಖು 8ನೆ ಮೇ 1907.

ನಂ. ಫೈ. 8487—ಜ. ಫೈ. 407-06—3; ಸ್ಯ 1907ನೆ ಇಸವಿಯ ಮೇ 6ನೆ ತಾರೀಖಿನ ಪೂರ್ವಾಹ್ನದಲ್ಲಿ ಕಂಟ್ರೋಲರವರ ಆಫೀಸಿನ ಚಾರ್ಜನ್ನು ಮಿ॥ ಎಂ. ಎಸ್. ಕೃಷ್ಣರಾಯರು ಒಪ್ಪಿಸಿದರು ಮತ್ತು ಮಿ॥ ಯು. ಎಲ್. ಮುಜಂದಾರವರು ತೆಗೆದುಕೊಂಡರು.

ಅಪ್ಪಣೆಯ ಮೇರೆಗೆ,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರಿಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 6ನೆ ಮೇ 1907.

ನಂ. 444—3369, ಅಸಿಸ್ಟೆಂಟ್ ಇಂಜಿನಿಯರ್ ಮೆ॥ ಎ. ಪುಟ್ಟಸ್ವಾಮ್ಯಯ್ಯನವರು, ಸ್ಯ 1907ನೆ ಜನವರಿ 19ನೆ ತಾರೀಖು 35—432ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 2 ತಿಂಗಳು 15 ದಿವಸಗಳ ಪ್ರಿವಿಲೇಜ್ ರಜಾವನ್ನು ಜನವರಿ 31ನೆ ತಾರೀಖಿನಿಂದ ಉಪಯೋಗಿಸಿಕೊಂಡು ಏಪ್ರೆಲ್ 11ನೆ ತಾರೀಖಿನಲ್ಲಿ ಕೆಲಸದಮೇಲೆ ಹಾಜರಾದ್ದರಿಂದ ಅವರು ಉಪಯೋಗಿಸಿಕೊಳ್ಳಿ ದಷ್ಟು 4 ದಿವಸಗಳ ರಜಾವನ್ನು ವಜಾ ಮಾಡಿದೆ.

ಹುಕುಂ ಬವೋಜೀಬ್,
ಬರ್ನಾರ್ಡ್ ಹಾಸ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನಮೆಂಟ್ ಅಂಡರ್ ಸೆಕ್ರಿಟರಿ.

ಮು ಜ ರೈ.

ಇಸ್ತಿಹಾರ್ನಾಮೆ.

ತಾರೀಖು 4ನೆ ಮೇ 1907.

ನಂ. 5150, ತಿಪ್ಟೂರು ತಾಲ್ಲೂಕು ಕಮ್ಮಗಟ್ಟದಲ್ಲಿರುವ ಶ್ರೀ ರಂಗನಾಥಸ್ವಾಮಿ ದೇವಸ್ಥಾನದ ಮೇಲ್ವಿಚಾರಣೆ ಬಗ್ಗೆ ಈ ಕೆಳಗೆ ನಮೂದಿಸುವವರನ್ನು ಧರ್ಮದರ್ಶಿಗಳಾಗಿ ನೇಮಿಸಿದೆ :—

ಮು" ರಾ॥ ರಾ॥ ಲಕ್ಷ್ಮೀನಾರಣಪ್ಪ, ಕಮ್ಮಗಟ್ಟ ಶ್ಯಾನುಭೋಗರು.
,, ಶಿದ್ದೇಗೌಡ, ಕಮ್ಮಗಟ್ಟದ ಪಟೇಲರು.
,, ಗವಿರಂಗಯ್ಯ, ಜಮೀನ್‌ದಾರ್.

ಹುಕುಂ ಬವೋಜೀಬ್,
ಎಲ್. ಅನಂತಸ್ವಾಮಿರಾವ್,
ಸೆಕ್ರಿಟರಿ.